# ಕೆಲವು ಸತ್ಯ ಸಂಗತಿಗಳು!



★ ಮಗು ಬೆಳೆಯುತ್ತಿರುವ ಸರಿಯಾದ ಸಮಯ ಅಂದರೆ– ನೀವು ಅದಕ್ಕೆ ಶಾಲಾ ಯೂನಿಫಾರಂ ತಂದ ಮೇಲೆ!

★ ಒಂದು ಮಗುವಿದ್ದರೆ ನೀವು ತಂದೆಯಾದಂತೆ, ಎರಡು ಮಕ್ಕಳಿದ್ದರೆ ನೀವು ರೆಫರಿ.

★ ಮದುವೆ ಅಂದರೆ ಅದು ಒಂದು ಸಂಬಂಧ, ಅಲ್ಲಿ ಒಬ್ಬರು ಯಾವಾಗಲೂ ಸರಿ, ಇನ್ನೊಬ್ಬರು ಗಂಡ.

★ ಅಯ್ಯೋ ನಿಮಗೆ ಬುದ್ಧಿ ಇಲ್ಲ ಅಂತ ಬೇಜಾರು ಮಾಡ್ಕೊಬೇಡಿ, ಬಹಳಷ್ಟು ಜನಕ್ಕೆ ಅದು ಇಲ್ಲ!

★ ಪ್ರೇಮ ವಿವಾಹವೋ, ನಿಶ್ಚಯಿಸಿದ ವಿವಾಹವೋ ಅಂತ ಯಾರಾದರೂ ಕೇಳಿದಾಗ, ಯಾಕೋ ಇದು 'ಆತ್ಮಹತ್ಯೆಯೋ ಇಲ್ಲಾ ಕೊಲೆಯೋ' ಅಂತ ಕೇಳಿದ ಹಾಗಿರುತ್ತೆ.



★ ತರುಣರು ಆಗಾಗ ನಿದ್ರಿಸುವುದು ಒಳ್ಳೆಯದು. (ಅದರಲ್ಲೂ ನೀವು ಡ್ರೈವ್ ಮಾಡುತ್ತಿರುವಾಗ ನಿದ್ರಿಸಿದರೆ) ಅದು ನಿಮ್ಮ ಮುದಿತನವನ್ನು ತಡೆಯುತ್ತದೆ.

★ ನೀವು ಇಷ್ಟ ಪಡುವವರೊಂದಿಗೆ ಮದುವೆಯಾಗಬೇಡಿ, ಅವರಿಲ್ಲದಿದ್ದರೆ ಬದುಕುವುದಕ್ಕೇ ಆಗುವುದಿಲ್ಲ ಅನ್ನುವವರೊಂದಿಗೆ ಮದುವೆಯಾಗಿ. ಏನೇ ಆದರೂ, ಕಡೆಗೆ ಪಶ್ಚಾತ್ತಾಪ ಪಡುವುದಂತೂ ಇದ್ದೇ ಇರುತ್ತದೆ.

★ ಪ್ರೀತಿಯನ್ನು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ, ಆದರೆ ಅದಕ್ಕೆ ಹೆಚ್ಚಾಗಿ ಖರ್ಚು ಮಾಡಬೇಕು!

★ ಕೆಟ್ಟ ಅಭ್ಯರ್ಥಿಗಳನ್ನು ಒಳ್ಳೆಯ ಮತದಾರರು ಚುನಾಯಿಸುತ್ತಾರೆ – ಚುನಾವಣೆಯಲ್ಲಿ ಓಟು ಮಾಡದೇ!

★ ಮದುವೆ ಅಂದರೆ ಕೊಡು– ಕೊಳ್ಳುವುದು. ನೀವು ಕೊಡುತ್ತಾ ಇರಿ, ನಿಮ್ಮ ಹೆಂಡತಿ ತೆಗೆದುಕೊಳ್ಳುತ್ತಾ ಇರುತ್ತಾರೆ!

★ ನಮ್ಮ ನುಡಿಯನ್ನು ಮಾತೃಭಾಷೆ ಅನ್ನುತ್ತಾರೆ. ಯಾಕೆಂದರೆ ಪಿತೃವಿಗೆ ಮಾತಾಡಲು ಅವಕಾಶವೇ ಇರೋಲ್ವಲ್ಲ.



★ ನಾನು ಮತ್ತು ನನ್ನ ಹೆಂಡತಿಯದ್ದು ಯಾವಾಗಲೂ ಒಮ್ಮತ. ನನ್ನದು ತಪ್ಪು ಅಂತ ಅವಳು ಹೇಳುತ್ತಾಳೆ, ನಾನು ಅದನ್ನು ಒಪ್ಪುತ್ತೇನೆ.

★ ಮಹಿಳೆಯರು ಮೊದಲು, ಸುಂದರ ಮಹಿಳೆಯರು ಇನ್ನೂ ಮೊದಲು!

★ ಯಾವುದೇ ಕೆಲಸವನ್ನು ಮಾಡುವುದಕ್ಕಿಂತ ಹೆಚ್ಚಾಗಿ ಬರೀ ನೆನಪು ಮಾಡಿಕೊಳ್ಳುತ್ತಾ ಇದ್ದರೆ ನಿಮಗೆ ವಯಸ್ಸಾಗುತ್ತಾ ಬಂದಿದೆ ಅಂತ ಅರ್ಥ.

★ ಉಳಿತಾಯ ಬಹಳ ಒಳ್ಳೆಯದು– ಅದರಲ್ಲೂ ನಿಮ್ಮ ತಂದೆ, ತಾಯಿಯರು ನಿಮಗಾಗಿ ಉಳಿಸಿದ್ದರೆ!

★ ಈ ಪ್ರಪಂಚದಲ್ಲಿ ಇರೋದು ಒಂದೇ ಒಂದು ಪರಿಪೂರ್ಣ ಮಗು. ಅದು ಅದರ ತಾಯಿಯ ಬಳಿ ಇದೆ.
ಈ ಪ್ರಪಂಚದಲ್ಲಿ ಇರೋದು ಒಬ್ಬಳೇ ಪರಿಪೂರ್ಣ ಹೆಂಡತಿ. ಅವಳು ಪಕ್ಕದ ಮನೆಯವನ ಬಳಿ ಇದ್ದಾಳೆ.

ಸಂಗ್ರಹ : ಸುಕೇಶವ

---



## ಆರಂಭವಾಗಿದೆ 'ಬೋನ್' ಬೆಳೆ

ಹಾನಿಗೊಳಗಾದ ಮೂಳೆಗಳ ರಿಪೇರಿಗೆ ಹೊಸ ತಂತ್ರವೊಂದನ್ನು ಇಸ್ರೇಲ್ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಮೂಳೆ ಮುರಿತ ಇಲ್ಲವೇ ಜಖಂಗೊಂಡ ಸಂದರ್ಭದಲ್ಲಿ ಅದರ ಚಿಕಿತ್ಸೆ, ಅಥವಾ ಮರು ಜೋಡಣೆಗೆ ಹೊಂದಾಣಿಕೆಯಾಗುವಂತೆ 'ಬೋನ್' ಬೆಳೆಯನ್ನು ಅವರು ಆರಂಭಿಸಿದ್ದಾರೆ.

ರೋಗಿಯ ಕೊಬ್ಬಿನ ಅಂಗಾಂಶವನ್ನು ತೆಗೆದುಕೊಂಡು ಆ ಮೂಲಕ ತಮಗೆ ಬೇಕಾಗುವ ಮಾದರಿಯ ಮೂಳೆಯನ್ನು ಉತ್ಪಾದಿಸಬಹುದು. ಅಂಗಾಂಶ ಒಂದರಲ್ಲಿ ಸುಮಾರು ಎರಡು ಇಂಚಿನಷ್ಟು ಮೂಳೆಯನ್ನು ಬೆಳೆಸಬಹುದು. ಪ್ರಸಕ್ತ ಸಾಲಿನಲ್ಲಿ ಪ್ರಾಯೋಗಿಕವಾಗಿ ತಾವು ಉತ್ಪಾದಿಸಿದ ಮೂಳೆಯನ್ನು ರೋಗಿಯೊಬ್ಬರಿಗೆ ಅಳವಡಿಸುವುದಾಗಿ ಸಂಶೋಧಕರು ಹೇಳಿದ್ದಾರೆ.

ಮೂಳೆ ಹಾನಿಗೊಳಗಾದ ರೋಗಿಯಿಂದಲೇ ಪಡೆದ ಅಂಗಾಂಶದಿಂದ ಪ್ರಯೋಗಾಲಯದಲ್ಲಿ ಮೂಳೆ ಬೆಳೆ ತೆಗೆಯುವ ತಜ್ಞರು ಸೂಕ್ತ ಸಂದರ್ಭದಲ್ಲಿ ಅದನ್ನು ಜೋಡಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

## ನಗರ ಮಕ್ಕಳಲ್ಲಿ ಆಹಾರ ಅಲರ್ಜಿ ಹೆಚ್ಚು

ಮಕ್ಕಳು ತಿನ್ನುವುದನ್ನೇ ಮರೆತು ಆಡುತ್ತವೆ. ಮುಷ್ಟಿ ಅನ್ನ ತಿನ್ನಿಸಲೂ ತಾಯಂದಿರು ಹರಸಾಹಸ ಪಡುತ್ತಾರೆ. ಇದಕ್ಕೆ ಕಾರಣ ಮಕ್ಕಳಲ್ಲಿ ಹೆಚ್ಚಾಗುತ್ತಿರುವ ಆಹಾರ 'ಅಲರ್ಜಿ'. ಅದರಲ್ಲೂ ಹಳ್ಳಿ ಮಕ್ಕಳಿಗಿಂತ ಹೆಚ್ಚಿನ ಪಾಲು ನಗರವಾಸಿಗಳಿಗೆ ಈ ಸಮಸ್ಯೆ ಕಾಡುತ್ತಿದೆ ಎಂದು ನೂತನ ಅಧ್ಯಯನವೊಂದು ಹೇಳಿದೆ.

ಜನದಟ್ಟಣೆ ಇರುವ ಪ್ರದೇಶದಲ್ಲಿ ವಾಸಿಸುವ ಮಕ್ಕಳಲ್ಲಿ ಇಂತಹ ಸಮಸ್ಯೆ ಹೆಚ್ಚು ಎಂದು ಅಧ್ಯಯನದ ನೇತೃತ್ವ ವಹಿಸಿದ್ದ ಮಕ್ಕಳ ವೈದ್ಯ ರುಚಿ ಗುಪ್ತಾ ಹೇಳಿದ್ದು, ಅದಕ್ಕೆ ಕಾರಣವನ್ನು ಗುರುತಿಸಿದ್ದಾರೆ.

ಹವಾಮಾನದ ವೈಪರಿತ್ಯವೇ ಅಲರ್ಜಿಗೆ ಮೂಲ ಎಂದು ಅವರು ಗುರುತಿಸಿದ್ದಾರೆ. ಈ ನಿರ್ಧಾರಕ್ಕೆ ಬರುವ ಪೂರ್ವದಲ್ಲಿಯೇ 18 ವರ್ಷಗಳ ಒಳಗಿನ 38465 ಮಕ್ಕಳ ಆಹಾರ ಕ್ರಮದ ಬಗ್ಗೆ ಅಧ್ಯಯನ ನಡೆಸಿದ್ದರು. ಒಟ್ಟಾರೆ ಶೇ.40ರಷ್ಟು ಮಕ್ಕಳಿಗೆ ಈ ರೀತಿಯ ಸಮಸ್ಯೆ ಇದೆ. ಅದರಲ್ಲಿ 9.8ರಷ್ಟು ನಗರವಾಸಿಗಳಿಗೆ ಈ ಸಮಸ್ಯೆ ಕಾಡಿದರೆ, ಶೇ.6.2ರಷ್ಟು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕಾಡಿದ್ದು ಅಧ್ಯಯನದಿಂದ ತಿಳಿದು ಬಂದಿದೆ.

## ಒತ್ತಡದಿಂದ ಮಕ್ಕಳ ಮೆದುಳಿಗೆ ಹಾನಿ

'ಓದು, ಓಡು, ಹಾಡು; ಎಲ್ಲದರಲ್ಲೂ ಬಹುಮಾನ ಗೆದ್ದು ತಾ. ಪರೀಕ್ಷೆಯಲ್ಲಿ ಮಾತ್ರ ಮೊದಲ ರ್‍ಯಾಂಕ್ ನಿನ್ನದಾಗಬೇಕು' ಹೀಗೆ ಏನೇನೋ ಮಹತ್ವಾಕಾಂಕ್ಷೆಯ ಕನಸುಗಳನ್ನು ಮಕ್ಕಳ ಮೇಲೆ ಹೇರುವುದು ತೀರಾ ಸಾಮಾನ್ಯವಾಗಿದೆ. ಆದರೆ ಅದು ಮಕ್ಕಳ ಮೆದುಳಿನ ಮೇಲೆ ಭೀಕರ ಹಾನಿಯನ್ನು ಉಂಟುಮಾಡುತ್ತದೆ ಎಂದು ಇತ್ತೀಚಿನ ಅಧ್ಯಯನ ಹೇಳಿದೆ.

ಮಕ್ಕಳ ಮೇಲಿನ ತೀವ್ರ ಒತ್ತಡ ಮಕ್ಕಳ ಸ್ಮರಣ ಶಕ್ತಿಯನ್ನೇ ಕುಂದಿಸುತ್ತದೆ. ಒತ್ತಡಕ್ಕೆ ಒಳಗಾದ ಮಕ್ಕಳಲ್ಲಿ ಅರಿವಿನ ಸಾಮರ್ಥ್ಯ ಕಡಿಮೆಯಾಗುತ್ತದೆ ಎಂದು ಅಮೆರಿಕದ ಸಂಶೋಧಕರು ಹೇಳಿದ್ದಾರೆ.

ಯಾವ ಕುಟುಂಬದ ಮಗುವೂ ಒತ್ತಡದಿಂದ ಮುಕ್ತವಾಗಿಲ್ಲ ಎಂದು ಸಂಶೋಧಕರಿಗೆ ಅನ್ನಿಸಿದೆ. ನೂರಕ್ಕೆ ನೂರರಷ್ಟು ಮಕ್ಕಳು ಮಾನಸಿಕ ಒತ್ತಡವನ್ನು ಅನುಭವಿಸುತ್ತಿದ್ದಾರೆಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಕೆಲಮೊಮ್ಮೆ ಮಕ್ಕಳ ಮೇಲೆ ಸುಳ್ಳು ಹಾಗೂ ಕಳ್ಳತನದ ಆರೋಪ ಹೊರಿಸಿ ಹಿಂಸೆಯನ್ನು ನೀಡಿದ ನಿದರ್ಶನಗಳಿವೆ ಎಂದಿದ್ದಾರೆ.

9ರಿಂದ 14ರ ವಯಸ್ಸಿನ 61ಮಕ್ಕಳನ್ನು ಅವರು ಸಂದರ್ಶಿಸಿದ್ದರು. ಜೊತೆಗೆ ಮಕ್ಕಳ ಮೆದುಳಿನ ಎಂಆರ್‌ಐ ಸ್ಕ್ಯಾನ್ ಕೂಡ ಮಾಡಿದ್ದರು.

–ಟಿಪ್ಸ್